ಮೂಲ ದಾವಾ ಸಂಖ್ಯೆ.21/2022 ಪಿ ಡಬ್ಲ್ಯೂ 1

(ದಿನಾಂಕ 04-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)
ಮಧ್ಯಂತರ ಅರ್ಜಿ ನಂ.3 ಮತ್ತು 4 ರ ಆದೇಶದ ದಿಃ 19-02-2026 ರನ್ವಯ
ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಸಿ ಬಿ ಪಿ ವಕೀಲರಿಂದಃ-

ನನ್ನ ಗಂಡನ ತಂದೆಯ ಹೆಸರು ಬಸರಕೋಡು ಲಕ್ಕಪ್ಪ ಎಂದರೆ ಸರಿ. ನನ್ನ ಗಂಡನ ಹೆಸರು ದೇವೇಂದ್ರಪ್ಪ ಎಂದರೆ ಸರಿ. ಸರ್ವೆ ನಂ.232 ಎಬಿಸಿಡಿ/5 ಎ, 4 ಸೆಂಟ್ಸ ಸರ್ವೆ ನಂ.362 ಬಿ4, 65 ಸೆಂಟ್ಸ, ಸರ್ವೆ ನಂ.565/ಬಿ2, 2 ಎಕರೆ ಜಮೀನನ್ನು ನಾವು ಚಿಲುಗೋಡು ಗ್ರಾಮ ಬಿಟ್ಟು ಹೋದ ನಂತರ ನಾವು ಖರೀದಿಸಿರುತ್ತೇವೆಂದರೆ ಸರಿ. ಚೌಟಗಿ ರೇಣುಕಮ್ಮ ಇವರಿಗೆ ಮಾರಾಟ ಮಾಡಿರುವ ಪ್ಲಾಟು ನನ್ನ ಗಂಡನದು ಇರುತ್ತದೆ. ಸದರಿ ಪ್ಲಾಟ್ ನಂ.131 ಅದನ್ನು ನನ್ನ ಗಂಡನ ತಂದೆ ಬಸರಕೋಡು ಲಕ್ಕಪ್ಪ ಇವರಿಗೆ ಸರ್ಕಾರದವರು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಂತರದಲ್ಲಿ ನನ್ನ ಗಂಡನ ಸದರಿ ಪ್ಲಾಟನ್ನು ಸನ್ 1991 ರಲ್ಲಿ ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾನೆಂದರೆ ಸರಿ ಸಾಕ್ಷಿ ಮುಂದುವರೆದು ನನ್ನ ಮಾವನ ಹೆಸರಿಗೆ ಸದರಿ ಪ್ಲಾಟನ್ನು ಕೊಟ್ಟಿರಲಿಲ್ಲವೆನ್ನುತ್ತಾರೆ. ಸದರಿ ಪ್ಲಾಟಿನ ನಂ.176 ಇರುತ್ತದೆಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಮರಣದ ನಂತರ ಸದರಿ ಪ್ಲಾಟನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆಂದರೆ ಸರಿ. ಸದರಿ ಪ್ಲಾಟ್ ನನ್ನ ಗಂಡನಿಗೆ ಅವರ ತಂದೆಯಿಂದ ಬಂದಿರುತ್ತದೆಂದರೆ ಸರಿಯಲ್ಲ. ಖಾತಾ ನಂ.176 ಈಗ ಖಾತಾ ನಂ.194 ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ಲಾಟು ನನ್ನ ಗಂಡನ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ದಾವಾಸ್ತಿಗಳು ವಿಭಾಗದಲ್ಲಿ ಪ್ರತಿವಾದಿಯರಿಗೆ ಹೋಗಿರುತ್ತವೆಂದರೆ ಸರಿಯಲ್ಲ. ಸದರಿ ಪ್ಲಾಟನ್ನು ಮಾರಾಟ ಮಾಡಿ ನಾನು ಮೇಲೆ ಹೇಳಿದ ಆಸ್ತಿಗಳನ್ನು ಖರೀದಿಸಿರುತ್ತೇನೆಂದರೆ ಸರಿಯಲ್ಲ. ಈಗಾಗಲೇ ವಿಭಾಗದಲ್ಲಿ ನಮಗೆ ಪ್ಲಾಟ್ ಬಂದಿದ್ದು ಅದನ್ನು ನಾವು ಮಾರಾಟ ಮಾಡಿ ಬೇರೆ ಆಸ್ತಿಗಳನ್ನು ಖರೀದಿಸಿರುವುದರಿಂದ ನಮಗೆ ದಾವಾಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ